ಸಾಹಿತ್ಯ ನೆಟ್‌ವರ್ಕ್ ಅನಿಸುವುದಿಲ್ಲ ಆದರೆ ಸಾಹಿತಿಗಳ ಒಂದು ನೆಟ್‌ವರ್ಕ್ ಖಂಡಿತ ಇದೆ. ಸಾಹಿತ್ಯ ಕ್ಷೇತ್ರದಲ್ಲಿ ಕೆಲಸ ಮಾಡುವಾಗ ಸೃಜನಶೀಲ ಕೃತಿಗಳ ಸೃಷ್ಟಿಯಲ್ಲಿ ತೊಡಗುವಾಗ ನಾವು ಎಲ್ಲಕ್ಕಿಂತ ಮುಖ್ಯವಾಗಿ ಬದ್ಧರಾಗಬೇಕಿರುವುದು ಬದುಕಿಗೆ. ನಮಗೆ ದಕ್ಕಿದ ಅನುಭವಗಳು ಮೊಟ್ಟಮೊದಲಿಗೆ ಮುಖ್ಯವಾಗಬೇಕು. ಅದಾದ ನಂತರ ಸಿದ್ಧಾಂತ, ತಾತ್ವಿಕತೆಗಳು ಮತ್ತು ನಿಲುವುಗಳು ಎಲ್ಲವೂ ಆನುಷಂಗಿಕವಾಗಿ ಪ್ರಸ್ತುತವಾಗುತ್ತವೆ. ದಿನನಿತ್ಯದ ಬದುಕಿನಲ್ಲಿ ಆ ಕ್ಷಣದ ಬದುಕು ಮುಖ್ಯವಾಗುತ್ತದೆ. ಆ ಬದುಕಿಗೆ ನನ್ನ ಬದ್ಧತೆ ತೋರಿಸಬೇಕು. ಒಂದು ಸೃಜನಶೀಲ ಕೃತಿಯ ಸೃಷ್ಟಿಯೂ ಅಷ್ಟೇ. ಅದರಲ್ಲಿ ಮೊದಲಿಗೆ ಪ್ರತಿಫಲಿತವಾಗುವುದು ಬದುಕು, ಆನಂತರ ಬರುವುದು ಸಿದ್ಧಾಂತ. ಒಂದು ಸಿದ್ಧಾಂತವನ್ನು ಎತ್ತಿಹಿಡಿಯಲೆಂದೆ ಒಂದು ಸೃಜನಶೀಲ ಕೃತಿಯನ್ನು ಸೃಷ್ಟಿ ಮಾಡಲು ಆಗುವುದಿಲ್ಲ. ಹಾಗೆ ಮಾಡಿದ ಪಕ್ಷದಲ್ಲಿ ಅದು ಅಪೂರ್ಣ ಎನ್ನಿಸಿಕೊಳ್ಳಬಹುದು.

◆ **ಹೆಣ್ಣುಮಕ್ಕಳ ಬರವಣಿಗೆ ಒಂದು ಕಡೆ ಇದೆ. ಗಂಡಸರು ಹೆಣ್ತನವನ್ನು ಆವಾಹಿಸಿಕೊಂಡು ಒಂದಷ್ಟು ನುಡಿಗಟ್ಟುಗಳನ್ನು ಬಳಸಿ (ಉದಾ: ಚೊಚ್ಚಲ ಕೃತಿ, ಕೃತಿ ಹಡೆಯುವುದು, ಕವಿತೆ ಪ್ರಸವಿಸುವುದು ಇತ್ಯಾದಿ) ಸಿದ್ಧ ಮಾದರಿಯಲ್ಲಿ ಸಾಹಿತ್ಯ ಸೃಷ್ಟಿ ಮಾಡುವುದು ನಡೆದಿದೆ. ಇದಷ್ಟೇ ಅಲ್ಲದೆ ಹೆಣ್ಣಿಗೆ ಹೀಗೆ ಅನ್ನಿಸಬಹುದು ಅಥವಾ ಹೆಣ್ಣು ಹೀಗೆ ಇರಬೇಕು ಎನ್ನುವ ನಿರೀಕ್ಷೆಯ ಭಾರ ಕಾಳಿದಾಸನ ಕಾಲದಿಂದಲೂ ಮಹಿಳೆಯರ ಮೇಲೆ ಇದೆ. ಇದರ ಬಗ್ಗೆ ನಿಮ್ಮ ಅಭಿಪ್ರಾಯ?**

ಇದಕ್ಕೆ ಒಂದೇ ಒಂದು ಸಾಲಿನಲ್ಲಿ ಅಕ್ಕಮಹಾದೇವಿಯ ಮಾತಿನಲ್ಲೇ ಉತ್ತರ ಹೇಳಬಹುದು – 'ನೊಂದ ನೋವ ನೋಯದವರೆತ್ತ ಬಲ್ಲರು?' ಇದನ್ನು ಅಹಂಕಾರ ಎಂದು ಭಾವಿಸದೆ ಅನುಭವದ ಮಿತಿ ಎಂದು ತಿಳಿದುಕೊಳ್ಳಬೇಕು. ಹೆರಿಗೆ ನೋವು ಸದಾಕಾಲವೂ ಉಂಟಾಗುವ ನೋವಲ್ಲ. ಅದು ಸಹಜ ಪ್ರಕ್ರಿಯೆ. ಆದರೆ, ಪುರುಷಪ್ರಧಾನ ಮೌಲ್ಯಗಳು ಸೃಷ್ಟಿ ಮಾಡಿರುವಂತಹ ನೋವುಗಳು ಹೆಣ್ಣುಮಕ್ಕಳ ಜೀವನದಲ್ಲಿ ಸಾಕಷ್ಟಿವೆ. ಆ ನೋವುಗಳು ಹೆರಿಗೆ ನೋವಿಗಿಂತ ತುಂಬಾ ದೊಡ್ಡವು. ಪುರುಷರು ಇದನ್ನು ಅರ್ಥಮಾಡಿಕೊಳ್ಳಬೇಕು.

ಸಾಹಿತ್ತಿಕವಾಗಿ ಮಹಿಳಾ ಸಂವೇದನೆಗಳನ್ನು ಇಟ್ಟುಕೊಂಡು ತುಂಬಾ ಚೆನ್ನಾಗಿ ಬರೆದ ಕೆಲವು ಉದಾಹರಣೆಗಳನ್ನು ಹೆಸರಿಸಬೇಕು ಎಂದರೆ ಒಂದು ಶಿವರಾಮ ಕಾರಂತರ 'ಮೈಮನಗಳ ಸುಳಿಯಲ್ಲಿ', ಮತ್ತು ನಮ್ಮ ಕೆ.ಎಸ್. ನರಸಿಂಹಸ್ವಾಮಿ ಅವರು ಗಂಡು ಹೆಣ್ಣಿನ ದಾಂಪತ್ಯವನ್ನು ಕಟ್ಟಿಕೊಡುತ್ತಾ ಬರೆಯುವ ಕವನಗಳು. ಅಲ್ಲಿ ಒಬ್ಬ ಹೆಣ್ಣು ಇದ್ದಾಳೆ. ಅದು ನನಗೆ ಮುಖ್ಯ ಆಗುತ್ತೆ. ಕುವೆಂಪು ಅವರ 'ಶ್ರೀ ರಾಮಾಯಣ ದರ್ಶನಂ'ನಲ್ಲಿ ಇರುವ ಸ್ತ್ರೀ ಚಿತ್ರಣ – ಈ ರೀತಿಯ ಧ್ವನಿಗಳನ್ನ ನಾವು ಯಾವತ್ತೂ ನಿರಾಕರಿಸಲು ಬರಲ್ಲ. ನನಗೆ ಕೆಲವೊಮ್ಮೆ ಇಪ್ಪತ್ತನೇ ಶತಮಾನದ ಯುಗಧರ್ಮದಲ್ಲೇ ಹೆಣ್ಣನ್ನು ಸಹಜೀವಿಯಾಗಿ ನೋಡುವ ಕಾಣ್ಕೆಯುಳ್ಳ ಶಕ್ತಿ ಇದ್ದಿರಬೇಕು ಅನ್ಸುತ್ತೆ. ಅದನ್ನ ಪಡಕೊಂಡವರು ದೊಡ್ಡವರಾದ್ರು. ಬೇಡ ಅಂದವರು ಅಲ್ಲೇ ಉಳ್ಕೊಂಡ್ರು.

ಪೂರ್ಣಚಂದ್ರ ತೇಜಸ್ವಿ ತಮ್ಮ ಸುತ್ತಲು ನೋಡಿಯೇ ತಾನೇ 'ಕಿರಗೂರಿನ ಗಯ್ಯಾಳಿಗಳು' ಕತೆ ಬರೆದಿದ್ದು? ಅವರಿಗೆ ಇದ್ದ ಗ್ರಹಿಕೆ ಬೇರೆ. ಅವರು ಅದನ್ನ ನೋಡುವ ನೆಲೆ ಬಹಳ ಗಟ್ಟಿಯಾದದ್ದು. ಅದನ್ನ ಹಾಗೆ ನೋಡಲು ನಿರಾಕರಿಸುವವರ ಕಣ್ಣಿಗೆ ಹೋರಾಡುವವರು ಬರೀ ಬಜಾರಿಗಳ ಹಾಗೆ ಕಾಣಿಸುತ್ತಾರೆ.

ನಮ್ಮ ನಮ್ಮ ಸ್ಥಾನಗಳಲ್ಲಿ ನಿಂತು ನಮ್ಮ ಕೆಲಸಗಳನ್ನು ನಾವು ಮಾಡಿಕೊಳ್ಳುತ್ತಾ ಹೋಗಬಹುದು. ನಮಗೆ ಅನ್ನಿಸಿದ್ದನ್ನು ಹೇಳುತ್ತಾ ಮುಂದುವರೆಯಬಹುದು. ಅವಳ ಜಗತ್ತು ಬೇರೆ ಇದೆ, ಅದರಲ್ಲಿ